ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ,

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ವಿಶೇಷ ವಿಭಾಗ, ನಜರ್‌ಬಾದ್, ಮೈಸೂರು.

E-mail:eepwdspecialmysuru@gmail.com
Phone No. & Fax No. 0821 2492297

ರವರಿಗೆ

600 -01
6|6|25

ಪ್ರಾಂಶುಪಾಲರು
ದಿ ಮೈಸೂರು ಡಯೋಸಿಸನ್ ಎಜ್ಯುಕೇಷನಲ್ ಸೊಸೈಟಿ,
ಸೈಂಟ್ ಜೋಸೆಫ್ಸ್ ಶಾಲೆ (ಸಿ.ಬಿ.ಎಸ್.ಇ)
ಜಯಲಕ್ಷ್ಮೀಪುರಂ, ಮೈಸೂರು.

ಮಾನ್ಯರೇ,

ವಿಷಯ: ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ದಿ ಮೈಸೂರು ಡಯೋಸಿಸನ್ ಎಜ್ಯುಕೇಷನಲ್ ಸೊಸೈಟಿಯ ಸೈಂಟ್ ಜೋಸೆಫ್ಸ್ (ಸಿ.ಬಿ.ಎಸ್.ಇ) ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಧೀನ ಕಾರ್ಯದರ್ಶಿ, ಪ್ರಾಥಮಿಕ ಶಿಕ್ಷಣ ಇಲಾಖೆರವರ ಸುತ್ತೋಲೆ ಸಂಖ್ಯೆ: ಇಡಿ:43:ಪಿಜಿಸಿ:2022 ದಿನಾಂಕ: 18.05.2022
2. ಸರ್ಕಾರದ ಅಪರ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರುರವರ ಸುತ್ತೋಲೆ ಸಂಖ್ಯೆ:ಲೋಇ:59:ಬಿಇಡಿ:2019 ದಿನಾಂಕ: 25.09.2024
3. ತಮ್ಮ ಕಛೇರಿ ಪತ್ರ ದಿನಾಂಕ : 18.03.2025
4. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರು ಇವರ ಕಛೇರಿ ಪತ್ರ ಸಂಖ್ಯೆ: 207 ದಿ: 03.06.2025

***

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ದಿ ಮೈಸೂರು ಡಯೋಸಿಸನ್ ಎಜ್ಯುಕೇಷನಲ್ ಸೊಸೈಟಿಯ ಸೈಂಟ್ ಜೋಸೆಫ್ಸ್ (ಸಿ.ಬಿ.ಎಸ್.ಇ) ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲು ತಾವು ಕೋರಿರುವ ಅನ್ವಯ ನಿಗಧಿತ ನಮೂನೆಯಲ್ಲಿ ಉಲ್ಲೇಖ ಪತ್ರ(4)ರಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರುರವರು ವರದಿ ಸಲ್ಲಿಸಿರುತ್ತಾರೆ.

ಸದರಿ ವರದಿಯಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರುರವರು ದಿನಾಂಕ:26.03.2025 ರಂದು ಪರಿವೀಕ್ಷಿಸಲಾಗಿದ್ದು, ಕಟ್ಟಡವು ಸುಸ್ಥಿತಿಯಲ್ಲಿರುವುದನ್ನು ಗಮನಿಸಲಾಗಿರುತ್ತದೆ. ಕಟ್ಟಡವು ನೆಲ + 3 ಅಂತಸ್ತಿನ ಕಟ್ಟಡವಾಗಿದ್ದು, ಸದರಿ ಕಟ್ಟಡದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಗುಣಭರವಸೆ ಉಪವಿಭಾಗ, ಮೈಸೂರು ರವರು ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ, ದಿ:19.05.2025 ರಂದು ಸದರಿ ಕಟ್ಟಡದ Ultrasonic Pulse Velocity Test and Rebound hammer Test ಮಾಡಿ ವರದಿಯನ್ನು ನೀಡಿರುತ್ತಾರೆ. ಸದರಿ ಪರೀಕ್ಷೆಯಲ್ಲಿ ಕಟ್ಟಡವು ಉತ್ತಮ ಗುಣಮಟ್ಟದಿಂದ ಕೂಡಿರುವುದು ಕಂಡುಬಂದಿರುತ್ತದೆ.

ಮು.ತಿ.ನೋ

ಪ್ರಾಂಶುಪಾಲರು, ದಿ ಮೈಸೂರು ಡಯೋಸಿಸನ್ ಎಜ್ಯುಕೇಷನಲ್ ಸೊಸೈಟಿ, ಸೈಂಟ್ ಜೋಸೆಫ್ಸ್ ಶಾಲೆ (ಸಿ.ಬಿ.ಎಸ್.ಇ) ಜಯಲಕ್ಷ್ಮೀಪುರಂ, ಮೈಸೂರುರವರು, ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ, ಪ್ರಾಥಮಿಕ ಶಿಕ್ಷಣ ಇಲಾಖೆರವರ ಸುತ್ತೋಲೆ ಸಂಖ್ಯೆ:ಇಡಿ:43:ಪಿಜಿಸಿ:2022 ದಿನಾಂಕ:18.05.2022 ಆದೇಶದಂತೆ ನಗರ ಪ್ರದೇಶದ ಶಾಲೆಗೆ ರೂ.5,000/- ಮತ್ತು ರೂ.900/- ಜಿ.ಎಸ್.ಟಿ ಶುಲ್ಕವನ್ನು ದಿನಾಂಕ:02.06.2025 ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸಿಲ್ವರ್ ಜುಬ್ಲಿ ರಸ್ತೆ ಶಾಖೆ, ಮೈಸೂರು, ಡಿ.ಡಿ.ಸಂಖ್ಯೆ:919411 & 919413 ರಲ್ಲಿ ಪಾವತಿಸಿರುತ್ತಾರೆ. ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ **ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಗುಣಭರವಸೆ ಉಪವಿಭಾಗ, ಮೈಸೂರು** ರವರು ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿದೆಯೆಂದು ನೀಡಿರುವ ಪ್ರಮಾಣ ಪತ್ರವನ್ನು ಪರಿಗಣಿಸಿ ಹಾಗೂ ಕಟ್ಟಡವನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರುರವರು ಕಟ್ಟಡವನ್ನು ಪರಿಶೀಲಿಸಿ, ಕಟ್ಟಡವು ಸದೃಡವಾಗಿರುವುದಾಗಿ ಉಲ್ಲೇಖ(4)ರ ಪತ್ರದಲ್ಲಿ ನೀಡಿರುವ ವರದಿಯನ್ನಾಧರಿಸಿ, ಕಾಲಕಾಲಕ್ಕೆ ಅವಶ್ಯ ಕಟ್ಟಡದ ನಿರ್ವಹಣೆಯನ್ನು ಕೈಗೊಳ್ಳುವ ಷರತ್ತಿಗೊಳಪಟ್ಟಂತೆ ಸದರಿ ಕಟ್ಟಡಕ್ಕೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರುರವರ ಶಿಫಾರಸ್ಸಿನ ಅನ್ವಯ 03 ವರ್ಷಗಳ ಕಾಲಾವಧಿಗೆ ಅಂದರೆ 2027-28 ನೇ ಸಾಲಿನವರೆಗೆ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ,

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ
1 ವಿಶೇಷ ವಿಭಾಗ, ಮೈಸೂರು.